ಬಾಗಲಕೋಟೆ ತಾಲ್ಲೂಕಿನಲ್ಲಿರುವ ಶಿರೂರು ಗ್ರಾಮಕ್ಕೆ ನೀರು ಸರಬರಾಜು ಯೋಜನೆ

292 (181) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).--ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಗುಳೇದಗುಡ್ಡ ಕ್ಷೇತ್ರದ ಬಾಗಲಕೋಟೆ ತಾಲ್ಲೂಕಿನ ಶಿರೂರು ಗ್ರಾಮಕ್ಕೆ ನಳದ ಯೋಜನೆ ಪೂರ್ತಿಯಾಗುವ ಅರ್ಧಕ್ಕೆ ನಿಂತಿರುವ ವಿಷಯ, ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಯೋಜನೆಯನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).--

ಅ) ಈ ಯೋಜನೆಯ ಕೆಲಸ ಕಾರ್ಯಗಳು ಸ್ಥಗಿತಗೊಂಡಿರುವುದಿಲ್ಲ. ಯೋಜನೆಯ ಕೆಲಸ ಕಾರ್ಯಗಳು ಪ್ರಗತಿಯಲ್ಲಿದೆ.

ಆ) ಈ ಯೋಜನೆಯನ್ನು ಮಾರ್ಚ್ 1984ರ ಒಳಗಾಗಿ ಪೂರ್ಣಗೊಳಿಸುವ ಗುರಿ ಇಟ್ಟುಕೊಳ್ಳಲಾಗಿದೆ.

ಶ್ರೀ ಮಲ್ಲಿಕಾರ್ಜುನ ವಿ ಬನ್ನಿ.--ಅಧ್ಯಕ್ಷರೇ, ಶಿರೂರು ಗ್ರಾಮಕ್ಕೆ ನಳದ ಯೋಜನೆ ಕೆಲಸ ಕಾರ್ಯಗಳು ಸ್ಥಗಿತಗೊಂಡಿರುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಒಂದು ಯೋಜನೆ ಎಂದು ಪ್ರಾರಂಭವಾಯಿತು ? ಈ ಒಂದು ಕೆಲಸ ಪ್ರಗತಿಯಲ್ಲಿ ಇದೆಯೇ ? ಮತ್ತು ಈ ಯೋಜನೆಯ ವೆಚ್ಚ ಎಷ್ಟು, ಹಾಗೂ ಇಲ್ಲಿಯವರೆಗೆ ಎಷ್ಟು ಹಣ ವೆಚ್ಚವಾಗಿದೆ ?

ಶ್ರೀ ಅಬ್ದುಲ್ ನಜೀರ್‌ಸಾಬ್.--ಈ ಒಂದು ಯೋಜನೆ 13-7-82 ರಲ್ಲಿ ಒಟ್ಟು 6.51 ಲಕ್ಷ ರೂಪಾಯಿಯ ಅಂದಾಜಿನಲ್ಲಿ ಮಂಜೂರಾಯಿತು. ಇದುವರೆಗೆ ಈ ಯೋಜನೆಗೆ 2.10 ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ. ಇದಕ್ಕೆ ಬಡ್ಜೆಟ್‌ನಲ್ಲಿ 1 ಲಕ್ಷ ರೂಪಾಯಿ ಇಡಲಾಗಿತ್ತು. ಇನ್ನೂ ಕೂಡ ಈ ಯೋಜನೆಗೆ ಸುಮಾರು 4 ಲಕ್ಷ ರೂಪಾಯಿಯಷ್ಟು ಖರ್ಚು ಮಾಡಬೇಕಾಗಿದೆ. 3 ತಿಂಗಳಿನಿಂದ ಈ ಒಂದು ಯೋಜನೆಯ ಕೆಲಸ ಪಿ. ವಿ ಸಿ. ಪೈಪ್‌ಗಳು ಇರದ ಕಾರಣ ಸ್ಥಗಿತಗೊಂಡಿತ್ತು. ಈಗ ಪಿ. ವಿ. ಸಿ ಪೈಪ್‌ಗಳು ಬಂದಿವೆ. ಈ ವರ್ಷದ ಮಾರ್ಚ್ ಒಳಗೆ ಅಲ್ಲಿ ಜನರಿಗೆ ನೀರು ಕೊಡುವ ಕೆಲಸ ಮಾಡುತ್ತೇವೆ. ಮುಂದಿನ ವರ್ಷ ಈ ಯೋಜನೆಯ ಪೂರ್ತಿ ಕೆಲಸವನ್ನು ಮಾಡಿ ಮುಗಿಸುವ ಆಸೆ ನನಗಿದೆ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.--ಈ ಒಂದು ಯೋಜನೆಯ ವೆಚ್ಚ 6.51 ಲಕ್ಷ ರೂಪಾಯಿ ಯಾಗಿದ್ದು ಇದುವರೆಗೆ 2.10 ಲಕ್ಷ ರೂಪಾಯಿ ಖರ್ಚು ಮಾಡಿದ್ದು ಇನ್ನೂ ನಾಲ್ಕೂವರೆ ಲಕ್ಷ ರೂಪಾಯಿ ಖರ್ಚು ಮಾಡಬೇಕಾಗಿದ್ದು ಇಷ್ಟನ್ನೂ ಮಾರ್ಚ್ ತಿಂಗಳ ಒಳಗೆ ಖರ್ಚುಮಾಡಿ ಕೆಲಸ ಪೂರೈಕೆ ಮಾಡಲು ಸಾಧ್ಯವೇ ?

ಶ್ರೀ ಅಬ್ದುಲ್ ನಜೀರ್‌ಸಾಬ್.--ಅಲ್ಲಿ ಟ್ಯಾಂಕ್ ಕಟ್ಟ ಬೇಕಾಗಿದೆ. ಅನೇಕ ಸಿವಿಲ್ ಕೆಲಸಗಳನ್ನು ಮಾಡಬೇಕಾಗಿದೆ. ಅಲ್ಲಿ ಪೈಪ್ ಹಾಕಿ ನೀರನ್ನು ಪಂಪ್ ಮಾಡಿ ಡೈರೆಕ್ಟ ಕನೆಕ್ಷನ್ ಕೊಡಬೇಕಾಗುತ್ತದೆ. ಅಲ್ಲಿ ಮಾರ್ಚ್ ತಿಂಗಳ ಒಳಗೆ ಜನರಿಗೆ ನೀರನ್ನು ಒದಗಿಸುತ್ತೇವೆಂದು ಹೇಳಿದ್ದೇವೆ. ಇನ್ನು ಉಳಿದ ಕೆಲಸ ಗಳೂ ಅಗತ್ಯವಾಗಿ ಆಗಬೇಕಾಗಿರುತ್ತದೆ. ಈ ಯೋಜನೆ ಬಗ್ಗೆ ಬಡ್ಜೆಟ್‌ನಲ್ಲಿ 1 ಲಕ್ಷ ರೂಪಾಯಿ ಇಟ್ಟಿದ್ದರೂ ಸುಮಾರು ಎರಡೂವರೆ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಹಾಗೂ ಇನ್ನೂ ನಾಲ್ಕೂವರೆ ಲಕ್ಷ ರೂಪಾಯಿ ಖರ್ಚು ಮಾಡಬೇಕಾಗಿದ್ದು ಮುಂದಿನ ವರ್ಷ ಅದನ್ನು ಖರ್ಚು ಮಾಡಿ ಮುಗಿಸುವವರಿದ್ದೇವೆ. ಈ ವರ್ಷ ನಾವು ಅವರಿಗೆ ನೀರನ್ನು ಕೊಡೋಣ.

ರಾಮದುರ್ಗ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು

293 (823) ಶ್ರೀ ಎಫ್. ಎ. ಕೊಪ್ಪದ್ (ರಾಮದುರ್ಗ).--ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ರಾಮದುರ್ಗ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ಖಾಲಿಇರುವ ಉಪಾಧ್ಯಾಯರ ಹುದ್ದೆಗಳ ಸಂಖ್ಯೆ ಎಷ್ಟು ;

ಆ) ಅನೇಕ ಶಾಲೆಗಳಲ್ಲಿ ಉಪಾಧ್ಯಾಯರೇ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;